**ದಿನಾಂಕಃ 06.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಪ್ರತಿ ವಾದಿ 8 ಮತ್ತು 9 ರವರ ಪರ ವಕೀಲರಿಂದ**

ಈ ಕೇಸಿನ ವಿಚಾರ ನನಗೆ ಗೊತ್ತು. ಪ್ರತಿವಾದಿ 1 ರಿಂದ 7 ರವರ ಮೇಲೆ ಏನು ಪರಿಹಾರ ಕೇಳಿದ್ದೇನೆಂದು ನನಗೆ ಹೇಳಲಾಗುವುದಿಲ್ಲ. ಮೃತ ರವಿ ನನಗೆ 4 ನೇ ಮಗ ಇರುತ್ತಾನೆ. ಈ ಕೇಸಿನಲ್ಲಿ ನಾನು 3 ಮನೆ ಮತ್ತು 2 ಸೈಟ್ ನ ಮೇಲೆ ಸಲ್ಲಿಸಿದ್ದೇನೆ. ದಾವಾ ಸ್ವತ್ತುಗಳು ಯಾರ ಹೆಸರಲ್ಲಿದೆ ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.ನನಗೆ ಓದಲು ಬರೆಯಲು ಬರುವುದಿಲ್ಲ. ನನಗೆ ಓದಲು ಬರೆಯಲು ಬರದ ಕಾರಣ ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳ ಬಗ್ಗೆ ನನಗೆ ಹೇಳಲಾಗುವುದಿಲ್ಲ. 8 ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. 8 ನೇ ಪ್ರತಿವಾದಿ ಬಳಿ ಏನೇನು ದಾಖಲೆ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ದಾವಾ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮಗ ಮೃತ ರವಿ ಮಹದೇಶ್ವರ ಬೆಟ್ಟದ ದೇವಸ್ಥಾನದಲ್ಲಿ ಮಾಡಿದ ಇಡುಗಾಯಿಗಳನ್ನು ಹರಾಜಿಗೆ ತೆಗೆದುಕೊಂಡು ಮಾರಾಟ ಮಾಡುವ ಕೆಲಸವನ್ನು 20 ವರ್ಷ ಮಾಡುತ್ತಿದ್ದ. ಆ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಮಗನ ಹೆಸರಿಗೆ LIC Policy ಮಾಡಿಸಿರುವುದಿಲ್ಲ. ನನಗೆ ಓದಲು ಬರೆಯಲು ಬರದ ಕಾರಣ ಈ ಕೇಸಿನಲ್ಲಿ ನಾನು ಏನು ಪರಿಹಾರ ಕೇಳಿದ್ದೇನೆಂದು ಹೇಳಲಾಗುವುದಿಲ್ಲ. 9 ನೇ ಪ್ರತಿವಾದಿ ಯಾರೇಂದು ನನಗೆ ಗೊತ್ತಿಲ್ಲ. 8 ಮತ್ತು 9 ನೇ ಪ್ರತಿವಾದಿ ಬಗ್ಗೆ ನನಗೇನು ಗೊತ್ತಿಲ್ಲ. ಅವರನ್ನು ಏನಕ್ಕಾಗಿ ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆಂದು ನನಗೆ ಹೇಳಲಾಗುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು. )

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.